ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಯಳಂದೂರು.

**CC** 501/2018

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಂಕರೇಗೌಡ | ಪ್ರಮಾಣ ಮಾಡಿದ ದಿನಾಂಕ 03.09.2022 |
| ತಂದೆ/ಗಂಡನ ಹೆಸರು | : | ಲೇಟ್ ಸಿದ್ದಯ್ಯ | |
| ವಯಸ್ಸು | : | 62 ವರ್ಷ | |
| ವೃತ್ತಿ | : | ನಿವೃತ್ತ ಸಹಾಯಕ ನಿರ್ದೇಶಕ, ತಾಲೂಕು ಪಂಚಾಯಿತಿ ಯಳಂದೂರು. | **CW**/2 |
| ವಾಸಸ್ಥಳ | : | ಮೈಸೂರು | **PW**/1 |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು 2015 ರಿಂದ 2019 ನೇ ಸಾಲಿನ ವರೆಗೆ ಸಹಾಯಕ ನಿರ್ದೇಶಕನಾಗಿ ಯಳಂದೂರಿನ ತಾಲೂಕು ಪಂಚಾಯಿತಿಯಲ್ಲಿ ಕೆಲಸವನ್ನು ನಿರ್ವಹಿಸಿದ್ದೇನೆ.

2018 ರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ಹಾಗೆ ಮೇ ತಿಂಗಳಲ್ಲಿ ನನ್ನನ್ನು ಅಂಕಿ ಅಂಶ ಕಣ್ಗಾವಲು ತಂಡದ ಅಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ.

ದಿನಾಂಕ 01.05.2018 ರಂದು ಪ್ರಧಾನ ಮಂತ್ರಿಗಳ ಚುನಾವಣೆಯ ಪ್ರಚಾರವನ್ನು ಸಂತೇಮರಹಳ್ಳಿಯ ದೇಶವಳ್ಳಿ ಗ್ರಾಮದಲ್ಲಿ ಏರ್ಪಾಡು ಮಾಡಲಾಗಿತ್ತು. ಚಾಸಾ–1 ರವರು ದಿನಾಂಕ 01.05.2018 ರಂದು ಬೆಳಿಗ್ಗೆ 6 ಗಂಟೆಗೆ ದೂರವಾಣಿ ಕರೆಯನ್ನು ಮಾಡಿ ಸಂತೇಮರಹಳ್ಳಿ ವೃತ್ತದಲ್ಲಿ ಅನಧಿಕೃತವಾಗಿ ಫ್ಲೆಕ್ಸಗಳು, ಬಂಟಿಂಕ್ಸ್, ಕಟೌಟ್‌ಗಳು ಹಾಗೂ ಬಾವುಟಗಳನ್ನು ಸರ್ಕಲ್ನಲ್ಲಿ ಕಟ್ಟಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಮುಂದುವರೆದು ಚಾಸಾ–1 ರವರು ನಮ್ಮನ್ನು ಸ್ಥಳಕ್ಕೆ ಬರಲು ಸೂಚಿಸಿರುತ್ತಾರೆ. ನಾನು ಸ್ಥಳಕ್ಕೆ ಬಂದು ನೋಡಿದಾಗ 60 ಮೀಟರಿನ 5 ಬಂಟೆಕ್ಸ್ ಗಳು, 4 ಬಿಜೆಪಿ ಪಕ್ಷದ ಬಾವುಟಗಳು ಮತ್ತು 4 ಫ್ಲೆಕ್ಸಗಳನ್ನು ಅನಧಿಕೃತವಾಗಿ ಕಟ್ಟಿರುವುದು ನನಗೆ ಕಂಡುಬಂದಿರುತ್ತದೆ. ಚಾಸಾ–1 ರವರು ಈ ಬಗ್ಗೆ ಪೊಲೀಸರಿಗೆ ಪ್ರಥಮ ಮಾಹಿತಿ ಹೇಳಿಕೆಯನ್ನು ನೀಡಿರುತ್ತಾರೆ. ನನ್ನ ಜೊತೆ ಆ ದಿನದಂದು ಸ್ಥಳಕ್ಕೆ ಚಾಸಾ–3 ರಿಂದ 5 ರವರುಗಳು ಕೂಡ ಬಂದಿದ್ದರು. ಚಾಸಾ–1 ರವರು ನಾನು ಹೋದಾಗ ಸ್ಥಳದಲ್ಲಿಯೇ ಇದ್ದರು. ನಾನು ಸ್ಥಳದಲ್ಲಿ ಇದ್ದಾಗ ಈ ಅನಧಿಕೃ ಫ್ಲೆಕ್ಸಗಳು, ಬಂಟಿಂಕ್ಸ್,

ಹಾಗೂ ಬಾವುಟಗಳನ್ನು ಸರ್ಕಲ್ನಲ್ಲಿ 1 ಮತ್ತು 2 ನೇ ಆರೋಪಿತರು ಕಟ್ಟಿರುವುದಾಗಿ ಜನರು ಮಾತನಾಡುತ್ತಿದ್ದರು. ನಾನು ಆರೋಪಿತರನ್ನು ನೋಡಿರುವುದಿಲ್ಲ ಆದರೆ ಅವರ ಹೆಸರುಗಳನ್ನು ಮಾತ್ರ ಕೇಳಿ ತಿಳಿದುಕೊಂಡಿರುತ್ತೇನೆ. ನನ್ನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶವನ್ನು ಕೋರಿರುತ್ತಾರೆ, ನ್ಯಾಯತಾ ದೃಷ್ಟಿಯಿಂದ ಶುಲ್ಕವನ್ನು ವಿಧಿಸಿ ಪಾಟೀ ಸವಾಲಿಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

03.09.2022.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.